**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ, ಚಿಕ್ಕಮಗಳೂರು.**

**ಸಿ.ಸಿ.693/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | **ಹರೀಶ್ ಜಿ. ರಾಯ್ಕರ್** | **ಪಿ.ಡಬ್ಲ್ಯೂ.1** |
| ತಂದೆಯ ಹೆಸರು | ಃ | **ಗೋವಿಂದ ಡಿ. ರಾಯ್ಕರ್** | **ಸಿ. ಡಬ್ಲ್ಯೂ.1** |
| ವಯಸ್ಸು | ಃ | **23 ವರ್ಷ** | |
| ವೃತ್ತಿ | ಃ | **ವಿದ್ಯಾರ್ಥಿ** | |
| ವಾಸ | ಃ | **ತರೀಕೆರೆ** | |

**ದಿನಾಂಕಃ 30-07-2024 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-**

**ನಾನು ಆರೋಪಿತರನ್ನ ನೋಡಿಲ್ಲ. ಚಾಸಾ-2 ರವರು ನನ್ನ ತಂದೆ. ಚಾಸಾ-3 ರವರು ನನ್ನ ತಾಯಿ. ಚಾಸಾ-4 ರವರು ನನ್ನ ದೊಡ್ಡಮ್ಮ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇಲ್ಲ. ನನಗೆ ಯಾರೂ ದರೋಡೆ ಮಾಡುವ ಉದ್ದೇಶದಿಂದ ಕಾರ್ ಕೀ ಮತ್ತು ಮೊಬೈಲ್ ಅನ್ನ ಕಿತ್ತುಕೊಂಡಿಲ್ಲ. ನನಗಾಗಲೀ ಅಥವಾ ನನ್ನ ತಂದೆಗಾಗಲೀ ಬೈದಿಲ್ಲ ಮತ್ತು ಹಲ್ಲೆ ಮಾಡಿಲ್ಲ. ಸಾಕ್ಷಿಗೆ ದೂರನ್ನ ತೋರಿಸಿ ಅದರ ಮೇಲೆ ನಿಮ್ಮ ಸಹಿ ಇದೆಯಾ ಎಂದು ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಸಾಕ್ಷಿಗೆ ತೋರಿಸಲಾದ ದೂರನ್ನ ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನ ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಹಜರ್ ಅನ್ನ ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮೇಲೆ ಹೇಳಿದ 2 ದಾಖಲಾತಿಯಲ್ಲಿ ಯಾವ ಉದ್ದೇಶಕ್ಕೆ ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ನನಗೆ**

ಮಾಹಿತಿ ಇಲ್ಲ ಎನ್ನುತ್ತಾರೆ. ಸಾಕ್ಷಿಗೆ ಫೋಟೋಗಳನ್ನ ತೋರಿಸಿ ಅವುಗಳಲ್ಲಿ ನೀವು ಇದ್ದೀರಾ ಎಂದರೆ ಸಾಕ್ಷಿ ಪೊಲೀಸರು ನಿಂತುಕೋ ಎಂದು ಹೇಳಿದ್ದರಿಂದ ಫೋಟೋಗಳಿಗೆ ನಿಂತಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ತೋರಿಸಲಾದ **4** ಫೋಟೊಗಳನ್ನ ನಿಪಿ-**3** ರಿಂದ ನಿಪಿ-**6** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನ ತೋರಿಸಿ ಅದರ ಮೇಲೆ ನಿಮ್ಮ ಸಹಿ ಇದೆಯಾ ಎಂದರೆ ಸಾಕ್ಷಿ ಅದರ ಮೇಲೆ ಇರುವ ತನ್ನ ಸಹಿಯನ್ನ ನೋಡಿ ಗುರುತಿಸಿದ್ದಾರೆ. ಅದನ್ನ ನಿಪಿ-**7** ಎಂದು ಮತ್ತು ಸಾಕ್ಷಿಯ ಸಹಿಯನ್ನ ನಿಪಿ-**7**(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ **2** ಫೋಟೊಗಳನ್ನ ತೋರಿಸಲಾಗಿ ಅವುಗಳಲ್ಲಿ ತಾನು ಇದ್ದೇನೆ ಎಂದು ಗುರುತಿಸಿದ್ದಾರೆ. ಅವುಗಳನ್ನ ನಿಪಿ-**8** ಮತ್ತು ನಿಪಿ-**9** ಎಂದು ಗುರುತಿಸಲಾಯಿತು. ಕಾರು ನನ್ನ ತಂದೆಯ ಹೆಸರಿನಲ್ಲಿ ಇದೆ.

(ಈ ಹಂತದಲ್ಲಿ ಎಪಿಪಿರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-

ದಿಃ**23.04.2022** ರಂದು ಬೆಳಗ್ಗೆಃ**05.00** ಗಂಟೆ ಸಮಯದಲ್ಲಿ ನನ್ನ ತಂದೆ-ತಾಯಿ ಹಾಗೂ ನನ್ನ ದೊಡ್ಡಮ್ಮನ ಜೊತೆ ಹಾಗೂ ನನ್ನ ದೊಡ್ಡಮ್ಮನ ಮಗಳು ಸುಧಾ ಹಾಗೂ ನನ್ನ ದೊಡ್ಡಮ್ಮನ ಮೊಮ್ಮಗಳು ಸಂಜನ ವ್ಯಾಗನಾರ್ ಕಾರ್ ನೊಂದಣಿ ಸಂಖ್ಯೆಃಕೆಎ-**05**/ಎಫ್-**4294** ವಾಹನದಲ್ಲಿ ತರೀಕೆರೆ ಬಿಟ್ಟು ಧರ್ಮಸ್ಥಳಕ್ಕೆ ಹೋಗಿ ದರ್ಶನ ಮಾಡಿಕೊಂಡು ಅಲ್ಲಿಂದ ಹೊರಟು ಸುಧಾ ಇವರ ಮನೆಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಆಗ ರಾತ್ರಿಃ**07.15** ಸಮಯ ಆಗಿತ್ತು ಎಂದರೆ ಸರಿಯಲ್ಲ. ಸುಜಾತ ಮತ್ತು ಸಂಜನಾ ಇವರನ್ನ ಅವರ ಮನೆಯಲ್ಲಿಯೇ ಬಿಟ್ಟು ನಾನು, ನನ್ನ ತಂದೆ-ತಾಯಿ, ನನ್ನ ದೊಡ್ಡಮ್ಮ ಉಜಿರೆಯನ್ನ ಸುಮಾರು ರಾತ್ರಿಃ**11.00** ಗಂಟೆಗೆ ಬಿಟ್ಟೆವು ಎಂದರೆ ಸರಿಯಲ್ಲ. ಆಗ ನನ್ನ ತಂದೆ ಕಾರು ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಿಃ**24.04.2022** ರ ಬೆಳಗ್ಗಿನ

ಜಾವ **02.00** ಗಂಟೆಗೆ ಚಿಕ್ಕಮಗಳೂರು ಸಮೀಪ ಬರುತ್ತಿದ್ದಾಗ ನಮ್ಮ ಕಾರಿನ ಹಿಂಬದಿಯಿಂದ ಯಾರೋ ಮೂರು ಜನ ಆಸಾಮಿಗಳು ಬಂದು ನಮ್ಮ ಕಾರಿಗೆ ಗುದ್ದುವ ರೀತಿಯಲ್ಲಿ ಬರುತ್ತಿದ್ದರು ಎಂದರೆ ಸರಿಯಲ್ಲ. ನಲ್ಲೂರು ಗೇಟ್ ನ ಹೆಚ್.ಪಿ.ಪೆಟ್ರೋಲ್ ಬಂಕ್ ಹಿಂಭಾಗ ನಮ್ಮ ವಾಹನವನ್ನ ನಿಧಾನ ಮಾಡಿದಾಗ ದ್ವಿಚಕ್ರ ವಾಹನದಲ್ಲಿ ಬಂದವರು ನಮ್ಮ ಕಾರನ್ನ ಅಡ್ಡಗಟ್ಟಿರುತ್ತಾರೆ ಎಂದರೆ ಸರಿಯಲ್ಲ. ಕಾರನ್ನ ನಿಲ್ಲಿಸಿದಾಗ ಬೈಕ್ ಚಾಲನೆ ಮಾಡುತ್ತಿದ್ದ ವ್ಯಕ್ತಿ ನಮ್ಮ ಬೈಕ್ ಗೆ ದಾರಿ ಕೊಡದೇ ಏಕೆ ಕಾರನ್ನ ಚಲಾಯಿಸುತ್ತೀಯಾ ಎಂದು ಚಾಕನ್ನು ತೆಗೆದು ನನ್ನ ತಂದೆಯ ಕುತ್ತಿಗೆಗೆ ಹಿಡಿದು ನೀವು ಗೋವಾದವರು ಇಲ್ಲಿಗೆ ಏಕೆ ಬಂದಿದ್ದೀರಾ ಎಂದು ಹಿಂದಿಯಲ್ಲಿ  ಬೈದರು ಎಂದರೆ ಸರಿಯಲ್ಲ. ಉಳಿದಿಬ್ಬರು ವ್ಯಕ್ತಿಗಳು ಬೈಕ್ ಬಳಿ ನಿಂತುಕೊಂಡು ನನ್ನ ಮೊಬೈಲ್ ನಲ್ಲಿ ಫೋನ್ ಮಾಡಲು ಹೋದಾಗ ಮೊಬೈಲ್ ಅನ್ನ ಕಿತ್ತುಕೊಂಡರು ಎಂದರೆ ಸರಿಯಲ್ಲ. ನನ್ನ ತಂದೆಯಿಂದ ಕಾರ್ ಕೀಯನ್ನೂ ಸಹ ಕಿತ್ತುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆನಂತರ ಸದರಿಯವರು ಹಣ ಕೊಡಿ ಎಂದು ದಮ್ಕಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಬಳಿ ಹಣ ಇಲ್ಲ ಎಂದು ಹೇಳಿದರು ಎಂದರೆ ಸರಿಯಲ್ಲ. ನನ್ನ ಕಾರ್ ನಿಂದ ಹಿಳಿದು ಆರೋಪಿತರ ಬಳಿ ಹೋಗಿ ಮೊಬೈಲ್ ಕೊಡಿ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ ನನ್ನ ತಂದೆಗೆ ಸದರಿಯವರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಇಬ್ಬರು ವ್ಯಕ್ತಿಗಳು ನನ್ನ ತಂದೆ ಜೇಬಿಗೆ ಕೈ ಹಾಕಿ ಹಣ ದೋಚಿಕೊಂಡು ಹೋದರು ಎಂದರೆ ಸರಿಯಲ್ಲ. ಆಗ ಒಬ್ಬ ವ್ಯಕ್ತಿ ನನ್ನ ತಂದೆ ಕೈಗೆ ಚಾಕುವಿನಿಂದ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಇನ್ನೊಬ್ಬ ವ್ಯಕ್ತಿ ಕಾರ್ ಕೀ ತೆಗೆದುಕೊಂಡು ಕಾರ್ ಮುಂದೆ ಹೋಗದಂತೆ ಮಾಡಿದ ಎಂದರೆ ಸರಿಯಲ್ಲ. ಆರೋಪಿತರು ನನಗೂ ಸಹ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬೈಕ್ ನಂಬರ್ ಅನ್ನ ಗಮನಿಸಿದಾಗ ಅದು ಕೆಎ-**51/1730** ಕಪ್ಪು ಬಣ್ಣದ

ಪಲ್ಸರ್ ಬೈಕ್ ಆಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 2 ನಿಮಿಷಗಳ ನಂತರ ಅದೇ ರಸ್ತೆಯಲ್ಲಿ ಬಂದ ಮತ್ತೊಂದು ಕಾರ್ ನಲ್ಲಿ ಇದ್ದವರಿಗೆ ತಿಳಿಸಿದಾಗ ಅವರನ್ನ ಹಿಂಬಾಲಿಸಿಕೊಂಡು ಹೋದಾಗ ಆರೋಪಿತರು ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ಕಾರಿನವರು ಪೊಲೀಸರಿಗೆ ಫೋನ್ ಮಾಡಿ ಜೊತೆಯಲ್ಲಿ ಕರೆದುಕೊಂಡು ಬಂದರು ಎಂದರೆ ಸರಿಯಲ್ಲ. ಮತ್ತೊಂದು ಕಾರ್ ನವರು ರಾಜೇಶ್ ಎಂದು ತಿಳಿಯಿತು ಎಂದರೆ ಸರಿಯಲ್ಲ. ನಾನು ಘಟನೆ ಸಂಬಂಧ ನಿಪಿ-1 ರಂತೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳದಲ್ಲಿ ನಿಪಿ-2 ರಂತೆ ದಿಃ24.04.2022 ರಂದು ಮಹಜರ್ ಬರೆದಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ಬೈಕ್ ಅಮಾನತ್ತುಪಡಿಸಿಕೊಂಡ ಸಂಬಂಧ ನಿಪಿ-7 ರಂತೆ ಮಹಜರ್ ಬರೆಯಲಾಗಿದೆ ಎಂದರೆ ಸರಿಯಲ್ಲ. ಆರೋಪಿತರ ಜೊತೆ ನಾನು ಪ್ರಕರಣವನ್ನ ರಾಜೀ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿಗಳ ಪರಃ ವಕೀಲರಿಂದಃ-

ಏನೂ ಇಲ್ಲ ಎಂದು ನುಡಿದಿರುತ್ತಾರೆ.

ಮರು ಸವಾಲುಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ